ಶ್ರೀ ಎಸ್. ಶಿವಪ್ಪ.— ಸರ್ಕಾರದ 3ನೇ ಯೋಜನೆಗೆ ಎಷ್ಟು ಹಣ ಖರ್ಚಾಗಬೇಕಾಗಿತ್ತೋ ಅಷ್ಟೆಲ್ಲಾ ಖರ್ಚಾದರೂ ಕೂಡ ಅದಕ್ಕೆ ತಕ್ಕಂತೆ ಸ್ಕಾಜೆಕ್ಟುಗಳು ಏಕೆ ಪೂರ್ಣವಾಗಿಲ್ಲ ಎಂಬುದನ್ನು ಎಮರ್ಜೆ ಮಾಡುವುದಕ್ಕೆ ಸರ್ಕಾರದವರು ಒಂದು ಇವ್ಯಾಲ್ಯೂಯೇಷನ್ ಕಮಿಟಿ ಮಾಡಿ ಎಮರ್ಜೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದರ ಅವಶ್ಯಕತೆ ಇಲ್ಲ ಏಕೆಂದರೆ, ಪೂರ್ತಿಯಾಗುವವರೆಗೂ ಅದರ ಫಲ ದೊರೆಯುವುದಿಲ್ಲ. ನೂರು ಕೋಟಿ ರೂಪಾಯಿನಲ್ಲಿ 95 ಕೋಟಿ ರೂಪಾಯಿ ಖರ್ಚು ಮಾಡಿ ಇನ್ನು ಐದು ಕೋಟಿ ರೂಪಾಯಿ ಖರ್ಚಾಗದೆ ಇದ್ದರೆ ಅದು ಆಗುವವರೆಗೂ ಪೂರ್ಣ ಫಲ ಬರುವುದಿಲ್ಲ. ಆದ್ದರಿಂದ ಕೈಯಲ್ಲಿ ಇರತಕ್ಕ ಹುಣ್ಣಿಗೆ ಕನ್ನಡಿಯೇನೂ ಬೇಕಾಗಿಲ್ಲ. ಯೋಜನೆಗಳು ಪೂರ್ತಿಯಾದ ಮೇಲೆ ಫಲ ಸಿಕ್ಕುತ್ತದೆ, ಅದು ಸ್ವಲ್ಪ ತಡವಾಗಿದೆ ಅಷ್ಟೆ.

ಶ್ರೀ ಎಸ್. ಶಿವಪ್ಪ.—ಎಸ್ಟಿಮೇಟ್ ಆದ ಯಾವುದೇ ಪ್ರಾಜೆಕ್ಟ್ ಆಗಲಿ ಅದಕ್ಕೆ ಎಷ್ಟು ಖರ್ಚು ಮಾಡಬೇಕಾಗಿತ್ತೋ ಅಷ್ಟನ್ನು ಮಾಡದಿದ್ದರೆ ಆ ಕೆಲಸ ಪೂರ್ತಿಯಾಗುವುದಿಲ್ಲ. ಅದು ಮುಖ್ಯವಾದ ಪ್ರಶ್ನೆ.

ಶ್ರೀ ಎಸ್. ನಿಜಲಿಂಗಪ್ಪ.—ಎಷ್ಟು ಖರ್ಚಾಗಬೇಕು, ಎಷ್ಟು ಖರ್ಚಾಗಿದೆ, ಖರ್ಚಾಗದೇ ಇದ್ದರೆ, ಏಕೆ ಆಗಿಲ್ಲ ಎಂಬುದನ್ನು ಆಲೋಚನೆ ಮಾಡಿ ಮುಂದಿನ ವರ್ಷ ಏನು ಮಾಡಬೇಕೆಂಬುದನ್ನು ತೀರ್ಮಾನ ಮಾಡುತ್ತೇನೆ. ಇದು ಪ್ರತಿ ವರ್ಷ ನಡೆಯುತ್ತಾ ಇದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಮೂರನೆಯ ಪಂಚವಾರ್ಷಿಕ ಯೋಜನೆಯೊಳಗೆ ಗೊತ್ತುಮಾಡಿದಂತಹ ಒಂದು ಟಾರ್ಜೆಟ್‌ನ್ನು ಪೂರ್ತಿ ಮಾಡುವುದರಿಂದ ಇಷ್ಟು ಪ್ರಗತಿಯಾಗುತ್ತದೆ ಎಂಬುದನ್ನು ಲೆಕ್ಕ ಹಾಕಿ ಇವತ್ತು 4ನೇ ಪಂಚವಾರ್ಷಿಕ ಯೋಜನೆಗೆ ಗೊತ್ತುಮಾಡಿರತಕ್ಕ ಹಣದಲ್ಲಿ ಇಷ್ಟು ಭಾಗ ಸ್ಪಿರ್ ಓವರ್‌ಗೆ ಖರ್ಚು ಮಾಡುತ್ತೇವೆ ಎಂದರೆ ಅಷ್ಟು ಪ್ರಗತಿ ಕುಂಠಿತವಾಗುವುದಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಇದು ಅಭಿಪ್ರಾಯದ ಮಾತು, ಮೊದಲೇ ಅರಿಕೆಮಾಡಿಕೊಂಡಂತೆ ಪ್ಲಾನಿಂಗ್ ಅನ್ನುವುದು ಇವತ್ತು ಮುಗಿಯೆತು ಇವತ್ತು ಪ್ರಾರಂಭವಾಯಿತು ಎಂದು ಹೇಳುವುದಕ್ಕಾಗುವುದಿಲ್ಲ, ಅನೇಕ ಕಾರಣಗಳಿಗಾಗಿ ಸ್ಪಿರ್ ಓವರ್ ಸ್ಕೀಂಸ್ ಉಳಿಯುತ್ತವೆ, ಆದ್ದರಿಂದ ಪ್ರಗತಿ ನಿಂತುಹೋಯಿತು ಅನ್ನುವುದು ಬುದ್ಧಿವಂತಿಕೆಯ ಮಾತಲ್ಲ.

Sri K. LAKKAPPA.—Is it not a fact that the Planning Commission has criticised the State Government for not having implemented the projects properly ?

Sri S. NIJALINGAPPA.—On the contrary, it has every praise for the Mysore Government.

Sri K. LAKKAPPA.—Has not Mr. Asokh Mehta levelled this charge against the State Government even in the presence of the present Chef Minister ?

(No reply)

Size of the IV plan of the State.

*Q.—73. **Sri H. D. DEVEGOWDA** (Holenarasipur).—

Will the Chief Minister be pleased to state :—

(*a*) what is the size of the IV Plan of the State ;

(*b*) whether the final concurrence of the Central Government (Planning Comission) has been obtained for the IV Plan of the State ;

(*c*) what is the Central share and what is the State share for the said plan ;

(*d*) what is the allocation made for Major Irrigation ?

A.—Sri S. NIJALINGAPPA (Chief Minister).—

(*a*) The Fourth Five Year Plan of the State has not yet been finalised.

(*b*) to (*d*) Does not arise in view of reply to (*a*).

ಶ್ರೀ ಎಚ್.ಡಿ. ದೇವೇಗೌಡ.—4ನೇ ಪ್ಲಾನ್ ಫೈನಲೈಸ್ ಆಗುವುದಕ್ಕೆ ಇರತಕ್ಕ ಅಡ್ಡಿ ಯಾದರೂ ಏನು ?

†ಶ್ರೀ ಎಸ್. ನಿಜಲಿಂಗಪ್ಪ.— ಅದಕ್ಕೆ ಅಡ್ಡಿ ಆತಂಕ ಸಾಕಾದಷ್ಟು ಇದೆ, ರೂಪಾಯಿನ ಬೆಲೆ ಕಡಮೆಯಾಗಿರುವುದು ಒಂದು ಹೊರಗಡೆಯಿಂದ ಬರತಕ್ಕ ಸಹಾಯ ದೊರೆಯದೇ ಇರುವುದು ಒಂದು. ಇವು ಎರಡು ಮುಖ್ಯವಾದ ಕಾರಣಗಳು, ಇತರ ಕಾರಣಗಳು ಇವೆ.

ಶ್ರೀ ಎಚ್. ಡಿ. ದೇವೆಗೌಡ.—ಈಗ ತಾವು ತಿಳಿಸಿರತಕ್ಕಂತೆ 4ನೇ ಪಂಚವಾರ್ಷಿಕ ಯೋಜನೆಯ ಡ್ರಾಫ್ಟ್ ಪ್ಲಾನ್‌ನನ್ನು ರೀಟೇನ್ ಮಾಡತಕ್ಕ ಸಂಭವ ಇದಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಹೇಳುವುದಕ್ಕಾಗುವುದಿಲ್ಲ, ನಮ್ಮ ಕುಂದುಕೊರತೆಯೇನು, ನಮ್ಮ ಅನಿವಾರ್ಯ ಏನು, ನಮ್ಮ ಅವಶ್ಯಕತೆಯೇನು ಎಂಬುದನ್ನು ಅವರಿಗೆ ತಿಳಿಸಿದ್ದೇವೆ ಅವರು ತಮಗೆ ಇರತಕ್ಕ ತೊಂದರೆಯನ್ನು ತಿಳಿಸಿದ್ದಾರೆ. ಹೀಗಾಗಿ ಸಾಕಾದಷ್ಟು ವಿಚಾರವಿನಿಮಯವಾಗಿದೆ. ಮತ್ತೊಮ್ಮೆ ಮಾತುಕತೆಯಾದ ಮೇಲೆ ತೀರ್ಮಾನಕ್ಕೆ ಬರಬೇಕಾಗುತ್ತದೆ. ಅದುವರೆವಿಗೂ ಇಷ್ಟೇ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಸಿ.ಜೆ. ಮುಕ್ಕಣ್ಣಪ್ಪ.—ನಿನ್ನೆ ಪೇಪರ್‌ನಲ್ಲಿ ಒಂದು ರಿಪೋರ್ಟ್ ಇದೆ. ವರ್ಲ್ಡ್ ಬ್ಯಾಂಕ್ ನವರು ನಿಮ್ಮ ಶಕ್ತಿ ಮೀರಿ ಒಂದು ಪ್ಲಾನ್ ಮಾಡಿದ್ದೀರಿ ಅದಕ್ಕೆ ಪ್ಲಾನ್ ಇಂಪ್ಲಿಮೆಂಟ್ ಮಾಡತಕ್ಕ ಶಕ್ತಿ ಇಲ್ಲ ಎಂದು ಹೇಳಿದ್ದಾರೆ. ಇದು ಇಡೀ ದೇಶಕ್ಕೆ ಅನ್ವಯವಾಗತಕ್ಕ ಯೋಜನೆಗೆ ಸಂಬಂಧ ಪಟ್ಟಂತೆ ಹೇಳಿದ್ದಾರೆ .. ....

Mr. SPEAKER.—We cannot criticise it here.

Sri C. J. MUCKANNAPPA.—We are approaching the Planning Commission and they have to approve our plan.

Mr. SPEAKER.—In so far as it relates to a matter not connected with the Legislature and Government and in so far as it relates to the Planning Commission, I do not think it will arise. So, the supplementary may be limited to our Draft Plan.

Sri C. J. MUCKANNAPPA.—In view of the doubt expressed by the World Bank on the question of financial aid to the Government of India and in view of the fact that we will get a share out of the financial aid given by the World Bank, will not our Fourth Plan be affected to that extent?

Sri S. NIJALINGAPPA.—That is a question which has to be directed o the Parliament.

ಶ್ರೀ ಎಸ್. ಶಿವಪ್ಪ.—3ನೇ ಯೋಜನೆ ಮುಗಿದು 10 ತಿಂಗಳಾಯಿತು. ಸ್ಪೀರ್ ಓವರ್ 4ನೇ ಯೋಜನೆಯಲ್ಲಿ ಎಷ್ಟಾಗುತ್ತದೆ ಎನ್ನುವುದು ಇದುವರೆಗೂ ಗೊತ್ತಿಲ್ಲ. 4 ಯೋಜನೆ ಪ್ರಾರಂಭವಾಗುತ್ತದೆಯೇ ! ಅದರ ಗತಿ ಏನು ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವೇ ?

Mr. SPEAKER.—Pending finalisation of the Fourth Five-Year Plan I believe that the annual plan has been discussed.

Sri S. NIJALINGAPPA.—It has been discussed; some money has been released but that is not much.

Mr. SPEAKER.—So, nothing has been kept idle ?

Sri S. NIJALINGAPPA.—No, except that in some cases the progress may be a little slow.

ಶ್ರೀ ಸಿದ್ದಯ್ಯ ಕಾಶೀಮಠ್.—ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ತಾವು ಹೇಳಿದ ಸ್ಪಿಲ್‌ಓವರ್ ಬಾಬತ್ತು 2 ಕೋಟಿ ರೂಪಾಯಿ ಸೇರಿಸಿ 450 ಕೋಟಿ ಎಂದು ತಾವು ಹೇಳುತ್ತಿದ್ದೀರೋ ಅಥವಾ ಅದನ್ನು ಬಿಟ್ಟು ಹೇಳುತ್ತಿದ್ದೀರೊ ?

ಶ್ರೀ ಎಸ್. ನಿಜಲಿಂಗಪ್ಪ.— ನಾಲ್ಕನೆಯ ಪಂಚವಾರ್ಷಿಕ ಯೋಜನೆ ಇನ್ನೂ ನಮಗೆ ಹೊಸದು. ಅದರಲ್ಲಿ ಸ್ಪಿಲ್‌ಓವರ್ ಮೊಬಲಗು ಸೇರಿಲ್ಲ.

Sri G. V. GOWDA.—May I know whether Government has taken steps to get more than 75 per cent Central assistance ?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕಾಗಿಯೇ ನಾವು ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ನಮ್ಮ ಯೋಜನೆಯನ್ನು ನಮ್ಮ ರಾಜ್ಯದ ವರಮಾನಕ್ಕೆ ಅನುಸಾರವಾಗಿ ಈಗ ನಿರ್ಧಾರವಾಗಿರತಕ್ಕ 450 ಕೋಟಿಯಲ್ಲಿ ಖೋತಾ ಮಾಡಬೇಕೆಂದು ಕೇಂದ್ರದಿಂದ ಒತ್ತಾಯ ಬಂದಿದೆ ಎಂಬುದು ನಿಜವೇ ?

ಶ್ರೀ ಎಸ್. ನಿಜಲಿಂಗಪ್ಪ.—ಕೇಂದ್ರದವರು ಎಲ್ಲಾ ರಾಜ್ಯಗಳಿಗೂ ಅವರವರ ಖರ್ಚುವೆಚ್ಚ ಗಳನ್ನು ಈ ಯೋಜನೆಯ ಸಂಬಂಧದಲ್ಲಿ ಅದಷ್ಟೂ ತಗ್ಗಿಸಬೇಕೆಂದು ಅವರು ಹೇಳುತ್ತಲೇ ಇದ್ದಾರೆ. ಅದೇ ರೀತಿ ನಮಗೂ ಹೇಳಿದ್ದಾರೆ. ಆದರೆ ನಾವು ಅವರನ್ನು ನಮ್ಮ ಗುರಿಯನ್ನು ಅನುಮೋದಿಸ ಬೇಕೆಂದು ಒತ್ತಾಯ ಮಾಡುತ್ತಲೇ ಇದ್ದೇವೆ. ಅಲ್ಲದೆ ಅವರು ನಮಗೆ ಯಾವ ಮಟ್ಟದಲ್ಲಿ ಎಷ್ಟರ ಮಟ್ಟಿಗೆ ಸಹಾಯ ಮಾಡಲು ಸಾಧ್ಯವಿದೆ ಎಂಬುದನ್ನು ನಾವು ಅವರಿಗೆ ತೋರಿಸಿಕೊಟ್ಟಿದ್ದೇವೆ.

ಶ್ರೀ. ಎಸ್. ಶಿವಪ್ಪ.—ನಾಲ್ಕನೇ ಪಂಚವಾರ್ಷಿಕ ಯೋಜನೆಯ ಮೊದಲನೇ ವರ್ಷದಲ್ಲಿ ಸರ್ಕಾರದವರ ಅಂದಾಜು ಪ್ರಕಾರ ಫಸ್ಟ್ ಸ್ಪೇಫಿನಲ್ಲಿ ಎಷ್ಟು ಹಣವನ್ನು ಖರ್ಚುಮಾಡಬೇಕೆಂದು ತೀರ್ಮಾನ ಮಾಡಿಕೊಂಡಿದ್ದಾರೆ.?

ಶ್ರೀ ಎಸ್. ನಿಜಲಿಂಗಪ್ಪ.—ಆಗಲೇ ಉತ್ತರ ಹೇಳಿದ್ದೇನೆ.

Sri GANGADHARA NAMOSHI.—Has the Upper Krishna Project been included in the 4th plan ?

ಶ್ರೀ ಎಸ್. ನಿಜಲಿಂಗಪ್ಪ.—ಸೇರಿಸಿದ್ದೇವೆ.

ಶ್ರೀ ಕೆ. ಲಕ್ಕಪ್ಪ.— ಹೊಸಹೇಜೆಯ ಉಕ್ಕಿನ ಕಾರ್ಖಾನೆಯನ್ನು ಈ ಯೋಜನೆಯಲ್ಲಿ ಸೇರಿಸಲು ಸರ್ಕಾರದವರು ಕೇಂದ್ರಕ್ಕೆ ಯಾವ ರೀತಿ ಒತ್ತಾಯ ಮಾಡಿದ್ದಾರೆ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ನಮಗೆ ಸಂಬಂಧಪಟ್ಟ ಕೆಲಸವಲ್ಲ. ಅದನ್ನು ಕೇಂದ್ರದವರು ಮಾಡಬೇಕಾದ್ದು. ಅದು ನಮ್ಮ ಕರ್ತವ್ಯವಲ್ಲ. ಆದರೆ ಅದನ್ನು ಈ ಯೋಜನೆಯಲ್ಲೇ ನಡೆಸುವಂತೆ ನಾವೂ ಮತ್ತು ಎಲ್ಲಾ ಸದಸ್ಯರೂ ಒತ್ತಾಯಮಾಡಿದ್ದಾರೆ. ಅದರ ಬಗ್ಗೆ ನಾವು ಸರ್ವಪ್ರಯತ್ನ ಗಳನ್ನೂ ಮಾಡುತ್ತಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ತಾವು ನಾಲ್ಕನೇ ಪಂಚವಾರ್ಷಿಕ ಯೋಜನೆಗಾಗಿ ಮೀಸ ಲಾಗಿರಬೇಕೆಂದು ಹೇಳತಕ್ಕ 450 ಕೋಟಿ ರೂಪಾಯಿಗಳಲ್ಲಿ ಎಷ್ಟು ಹಣವನ್ನು ಮೊದಲನೆ ವರ್ಷ ಪ್ರಾರಂಭ ಮಾಡಬೇಕಾದ ಸ್ಪಿರ್ ಓವರಿಗೆ ತಗೆದಿಟ್ಟಿದ್ದೀರಿ ಎಷ್ಟು ಹಣ ಖರ್ಚಾಗಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕೆ ಪ್ರತ್ಯೇಕ ಪ್ರಶ್ನೆ ಕಳುಹಿಸಿದರೆ ಉತ್ತರ ಒದಗಿಸಲಾಗುವುದು.

ಶ್ರೀ ಗಂಗಾಧರ ನಾಮೋಷಿ.—ಈ ನಾಲ್ಕನೇ ಯೋಜನೆಯಲ್ಲಿ ಅಪ್ಪರ್ ಕೃಷ್ಣ ಅಣೆಕಟ್ಟಿನ ಕೆಲಸವನ್ನು ಮುಂದುವರಿಸುವುದಕ್ಕಾಗುವುದಿಲ್ಲ ಎಂದು ಶ್ರೀ ಕೆ. ಎಲ್. ರಾಯರು ಹೇಳಿದ್ದಾರಲ್ಲಾ ಅದರ ಬಗ್ಗೆ ಸರ್ಕಾರದವರ ಗಮನ ಸೆಳೆದಿದೆಯೆ ?

ಶ್ರೀ ಎಸ್. ನಿಜಲಿಂಗಪ್ಪ.—ಅವರು ಹಾಗೆ ಹೇಳಿಲ್ಲ. ತಾವು ಹೇಳಿದಂಥ ವಿಚಾರ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನಗೆ ಮಾನ್ಯ ಸಚಿವರು ಪ್ರತ್ಯೇಕ ಪ್ರಶ್ನೆ ಕಳುಹಿಸಬೇಕೆಂದು ಹೇಳಿದರು. ಆದರೆ ಇನ್ನು ಮೂರು ತಿಂಗಳಲ್ಲಿ ಯೋಜನೆಯ ಮೊದಲನೇ ವರ್ಷ ಮುಗಿಯುತ್ತದೆ. ಆದ್ದರಿಂದ ಈ ವರ್ಷ ಎಷ್ಟು ಹಣವನ್ನು ಖರ್ಚುಮಾಡಬೇಕೆಂದಿದ್ದರೋ ಅಷ್ಟು ಹಣವನ್ನು ಈ ಮೂರು ತಿಂಗಳಲ್ಲಿ ಖರ್ಚುಮಾಡುವುದಕ್ಕೆ ಸಾಧ್ಯವಿದೆಯೇ ?

Mr. SPEAKER.—I suggest the hon'ble member to kindly wait till Monday when the Supplementary Demands will be presented.

Sri C. J. MUCKANNAPPA.—In March 1967 the first year of the 4th plan would be over and we will be entering the 2nd year.

Mr. SPEAKER.—Unless it is sanctioned in supplementary demands nothing is going to be spent. The House does not know what is going to be presented in the supplementary demands. Why not have some patience and wait?

ಶ್ರೀ ಎಚ್. ಡಿ. ದೇವೇಗೌಡ.—ಈಗ ಇರತಕ್ಕ ಅಂದಾಜದಲ್ಲಿ ಮೇಜರ್ ಇರಿಗೇಷನ್ನಿಗೆ 64 ಕೋಟಿ ಎಂದು ನಿಗದಿಯಾಗಿದೆ. ಮುಂದೆ ಇದೇನಾದರೂ ಖೋತ ಆಗುತ್ತದೆಯೆ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಕಡಮೆಮಾಡುವುದಲ್ಲ—ಅದನ್ನಿನ್ನೂ ನಾವು ಹೆಚ್ಚು ಮಾಡಬೇಕೆಂದಿದ್ದೇವೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.— ಈ ನಾಲ್ಕನೇ ಪ್ಲಾನಿನಲ್ಲಿ ಅಲಮಟ್ಟಿ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗಳ ಬಗ್ಗೆ ಒದಗಿಸಿದ್ದ ಹಣವೆಷ್ಟು ಮತ್ತು ಅದರಲ್ಲಿ ಖರ್ಚಾಗಿರತಕ್ಕದ್ದು ಎಷ್ಟು?

ಶ್ರೀ ಎಸ್. ನಿಜಲಿಂಗಪ್ಪ.—ಇದಕ್ಕೆ ಕೊಡತಕ್ಕ ಉತ್ತರವನ್ನು ಇನ್ನೂ ಸ್ವಲ್ಪಕಾಲ ತಡೆದರೆ ಅನುಕೂಲವೆಂದು ನಾನು ತಿಳಿಸಲಿಚ್ಛಿಸುತ್ತೇನೆ.

ಶ್ರೀ ಎಸ್. ಶಿವಪ್ಪ.—ಕೃಷ್ಣಾ ಪ್ರಾಜೆಕ್ಟಿನಂಥ ಪ್ರಾಜೆಕ್ಟ್‌ಗಳನ್ನು ಅಂದರೆ 25 ಕೋಟಿ ರೂಪಾಯಿಗಳ ವೆಚ್ಚದ ಪ್ರಾಜೆಕ್ಟ್‌ಗಳನ್ನು ಕೇಂದ್ರದವರೇ ವಹಿಸಬೇಕೆಂದು ನಮ್ಮ ಮುಖ್ಯ ಮಂತ್ರಿಗಳು ಪದೇ ಪದೇ ಹೇಳುತ್ತಿದ್ದಾರೆ. ಅದರಂತೆ ಅವುಗಳನ್ನು ಮಾಡುವುದಕ್ಕೆ ಅವರು ಒಪ್ಪಿಕೊಂಡಿದ್ದಾರೆಯೆ?

ಶ್ರೀ ಎಸ್. ನಿಜಲಿಂಗಪ್ಪ.—ಅವರಿನ್ನೂ ಒಪ್ಪಿಕೊಂಡಿಲ್ಲ, ನಾವು ಅವರನ್ನು ಒತ್ತಾಯ ಮಾಡುತ್ತಲೇ ಇದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರದವರೀಗ ಪವರ್ ಪ್ರಾಜೆಕ್ಟಿಗೆ 105 ಕೋಟಿ ರೂಪಾಯಿಗಳನ್ನು ಮತ್ತು ಮೇಜರ್ ಇರಿಗೇಷನ್ನಿಗೆ 65 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಆದರೆ ಈ ಪವರ್ ಪ್ರಾಜೆಕ್ಟಿನಲ್ಲಿ ಸ್ವಲ್ಪ ಭಾಗವನ್ನು ಕತ್ತರಿಸಿ ಇರಿಗೇಷನ್ ಪ್ರಾಜೆಕ್ಟಿಗೆ ಸೇರಿಸುವುದಕ್ಕಾಗುವುದಿಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಇದೊಂದು ಸಲಹೆ ಮಾತ್ರ.

ಶ್ರೀ ಎಚ್. ಆರ್. ಕೇಶವಮೂರ್ತಿ.—ವ್ಯವಸಾಯದ ಬಾಬಿಗೆ ಸಾಕಷ್ಟು ಹಣವನ್ನು ಈ ಯೋಜನೆಯಲ್ಲಿ ಮೀಸಲಾಗಿಟ್ಟಿಲ್ಲ. ಅದ್ದರಿಂದಲೂ ಮತ್ತು ಈ ವರ್ಷ ಎಲ್ಲಾ ಕೆರೆಕಟ್ಟೆಗಳೂ ತುಂಬಿರುವುದರಿಂದಲೂ ಸರ್ಕಾರದವರು ರೈತರಿಗೆ ಹೆಚ್ಚು ಗೊಬ್ಬರವನ್ನು ಒದಗಿಸಲು ಪ್ರಯತ್ನ ಮಾಡುತ್ತಾರೆಯೇ?

Mr. SPEAKER.—The fertilizer factory is a private concern. The Government may or may not participate. It is not covered by the State 4th Plan.

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕೆ ಸ್ವಲ್ಪ ಹೆಚ್ಚಿನ ಹಣವನ್ನು ಒದಗಿಸೋಣ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರದವರು ಸ್ಪಿಲ್ಲೋವರಿನಲ್ಲಿ 250 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಹೇಳಿರುವಾಗ, ಡ್ರಾಫ್ಟ್ ಪ್ಲಾನಿನಲ್ಲಿ ಹೇಳಿರತಕ್ಕ 450 ಕೋಟಿಗಳಲ್ಲಿ ಇರಿಗೇಷನ್ ಮತ್ತು ಪವರ್ ಪ್ರಾಜೆಕ್ಟ್‌ಗಳಿಗೆ 170 ಕೋಟಿ ಹೋದರೆ ಇನ್ನುಳಿದ ಹಣವನ್ನು ಏತಕ್ಕೆ ಖರ್ಚು ಮಾಡುತ್ತಾರೆ?

ಶ್ರೀ ಎಸ್. ನಿಜಲಿಂಗಪ್ಪ.—ಇದು ಈಗ ಸ್ಪಿರ್ ಓವರ್ ಆದದ್ದು. ಹಾಗೇ 4ನೆಯದರಿಂದ 5ನೆಯದಕ್ಕೆ ಹಾಗೇ ಮುಂದುವರಿದುಕೊಂಡು ಹೋಗುತ್ತಿರುತ್ತೆ. ಅದು ಇಲ್ಲಗೇ ನಿಲ್ಲುವುದಿಲ್ಲ ಯಾವಾಗಲೂ ಪ್ಲಾನುಗಳನ್ನು ನಿಯೋಜನೆ ಮಾಡತಕ್ಕದ್ದೇ ಹೀಗೆ.

ಶ್ರೀ ಬಿ. ಬೈರಪ್ಪಾಜಿ.—ಹೇಮಾವತಿ ನದಿ ಅಣೆಕಟ್ಟನ್ನು ಮಾಡುವುದಕ್ಕೆ ಕೆಲಸವನ್ನು ಕೈಗೊಂಡಾಗ ಅದರ ನೀರನ್ನು ತುಮಕೂರು ಮತ್ತು ಮಂಡ್ಯ ಜಿಲ್ಲೆಗಳಿಗೆ ಒದಗಿಸಲಾಗುವುದೆಂದು ಹೇಳಲಾಗಿತ್ತು. ಈಗ ಕೆಲಸ ಎರಡನೆ ಸ್ಟೇಜಿಗೆ ಹೋಗುತ್ತಿದೆ. ಭರವಸೆ ಎಲ್ಲಿಯವರೆಗೆ ಬಂತು ಎಂಬುದನ್ನು ಹೇಳುವರೇ?

ಶ್ರೀ ಎಸ್. ನಿಜಲಿಂಗಪ್ಪ.—ಮಹಾ ಮಹಾ ದೇವರೇ ಮಣ್ಣು ಮುಕ್ಕುತ್ತಿರುವಾಗ ತಬ್ಬಲಿ ದೇವರು ತಂಬಿಟ್ಟನ್ನ ಬೇಡಿತು ಎಂಬ ಗಾದೆಯಂತೆ ಇದೆ, ಈ ಉಪಪ್ರಶ್ನೆ. ಮೊದಲು ಅಲ್ಲ ಪ್ರಾಜೆಕ್ಟು ಆಗಲಿ, ಅಲ್ಲಗೆಷ್ಟು ನೀರುಬೇಕು, ಎಷ್ಟು ಉಳಿಯುತ್ತೆ ಎಂಬುದನ್ನೆಲ್ಲಾ ನೋಡಿದ ನಂತರ ತಾನೆ ಈ ಪ್ರಶ್ನೆ ಏಳುವುದು?

ಶ್ರೀ ಎ. ಕೃಷ್ಣಶೆಟ್ಟಿ.—ಈಗ ಸ್ಪೀಕರ್ ಒವರಿಗೆ ಒದಗಿಸಿರತಕ್ಕ ಹಣ ಬಹಳ ಕಡಮೆಯಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಅವರ ಅಭಿಪ್ರಾಯ.

ಶ್ರೀ ಗಂಗಾಧರ ನಾಮೋಷಿ.—ಈ ಪ್ಲಾನಿನಲ್ಲಿ ರೈಲ್ವೆಲೈನನ್ನು ಹಾಕತಕ್ಕ ಆಶ್ವಾಸನೆಯನ್ನು ಕೇಂದ್ರದವರೇನಾದರೂ ಕೊಟ್ಟಿದ್ದಾರೆಯೇ?

Mr. SPEAKER.—Are you talking of the plan for the State or the Centre ?

Sri GANGADHAR NAMOSHI.—Communication is most important for the development of Mysore State. What steps this Government have taken for insisting on the Central Government for the improvement of railways in this State ?

Mr. SPEAKER.—Is it inside the 4th Draft Plan of Mysore State ? Railways are a Central subject ? It is a good point for argument, but not for supplementary question here.

ಶ್ರೀ ಎಚ್. ಡಿ. ದೇವೇಗೌಡ.—ಮೂರನೆ ಯೋಜನೆಯಲ್ಲಿ ಮೇಜರ್ ಇರಿಗೇಷನ್ ಕೆಲಸಗಳು ನಡೆದಿದ್ದವು. ಅವುಗಳಲ್ಲಿ ಕೆಲವನ್ನು ನಿಲ್ಲಿಸಬೇಕಾದ ಸನ್ನಿವೇಶ ಬಂದಿಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.—ಆ ರೀತಿ ನಿಲ್ಲಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಕೆಲಸವನ್ನು ನಡೆಸುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಾಳಿ ನದಿ ಯೋಜನೆಯನ್ನು ನಾಲ್ಕನೆ ಯೋಜನೆಯಲ್ಲಿ ತೆಗೆದುಕೋಳ್ಳುತ್ತೇವೆಂದು ಒಂದು ಕಡೆ ಹೇಳಿದ್ದೀರಿ. ಪ್ರೆಸ್ ರಿಪೋರ್ಟ್ ಸಹ ಕೊಟ್ಟಿದ್ದೀರಿ. ಆದರೆ ನಾಲ್ಕನೆ ಪ್ಲಾನ್‌ನಲ್ಲಿ ನೋಡಿದರೆ ಅದರದ್ದು ನಾಪತ್ತೆಯಾಗಿದೆ. ಆದ್ದರಿಂದ ಕಾಳಿ ನದಿ ಯೋಜನೆ ಗೋಸ್ಕರ ಎಷ್ಟು ಖರ್ಚು ಮಾಡಬೇಕೆಂದು ಸರ್ಕಾರ ಯೋಚನೆ ಮಾಡಿದೆ ? ಅಲ್ಲದೆ ಯಾವ ಆಧಾರದ ಮೇಲೆ ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಇದರಲ್ಲಿ ಲಮ್ಪ್‌ಸಂ ಪ್ರಾವಿಷನ್ ಇದೆ. ಕಾಳಿ ನದಿ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಸಿದ್ದಯ್ಯ ಕಾಶಿಮಠ್.—ಮೊನ್ನೆದಿವಸ ಆಂಧ್ರದ ಮುಖ್ಯ ಮಂತ್ರಿಯವರಾದ ಶ್ರೀ ಬ್ರಹ್ಮಾನಂದರೆಡ್ಡಿಯವರು ನಾಲ್ಕನೆ ಯೋಜನೆಯಲ್ಲಿ ಖಚಿತವಾಗಿ ಸ್ಟೀರ್ ಪ್ರಾಜೆಕ್ಟನ್ನು ಆಂಧ್ರದಲ್ಲಿ ಸ್ಥಾಪಿಸುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಶ್ರೀ ಎಸ್. ನಿಜಲಿಂಗಪ್ಪ.—ನನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದೇನೆ. ಮೂರು ವರ್ಷದಿಂದ ದೇಶದ ಹಿತದೃಷ್ಟಿಯಿಂದ ಅದರ ಬಗ್ಗೆ ಕೆಲಸ ಮಾಡಿದ್ದೇವೆ.

ಶ್ರೀ ಜಿ. ಏ. ಗೌಡ.—ಕಾವೇರಿ ಬೇಸಿನ್‌ಗೆ ನಾಲ್ಕನೆ ಯೋಜನೆಯಲ್ಲಿ 20 ಕೋಟಿ ರೂಪಾಯಿಗಳನ್ನು ಇಡುವುದಕ್ಕೆ ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಕಾವೇರಿ ಬೇಸಿನ್ ತೆಗೆದುಕೊಂಡಿದ್ದೇವೆ. ಇದರಲ್ಲಿ ಹೇಮಾವತಿ, ಕಪಿನಿ, ಹಾರಂಗಿ ಮತ್ತು ಯಗಚಿ ಯೋಜನೆಗಳು ಬರುತ್ತವೆ. ಹಾರಂಗಿ ಯೋಜನೆಗೆ ಪಾಂಡೇಷನ್ ಹಾಕಿದೆ.

ಶ್ರೀ ಎಸ್. ಎಂ. ಕೃಷ್ಣ.—ಉಕ್ಕಿನ ಕಾರ್ಖಾನೆಯ ಬಗ್ಗೆ ಆಂಧ್ರದಲ್ಲಿ ಚಳವಳಿ ನಡೆಯುತ್ತಿದೆ. ಅದೇ ರೀತಿ ನಮ್ಮ ಸರ್ಕಾರದ ಕೈ ಬಲಪಡಿಸುವುದಕ್ಕೆ ನಮ್ಮ ರಾಜ್ಯದಲ್ಲಿ ಶಾಂತಿಯುತವಾದ ಸತ್ಯಾಗ್ರಹವನ್ನು ಏರ್ಪಡಿಸಬೇಕೇ, ಸ್ವಾಮಿ ?

Mr. SPEAKER.—Order, Order. I want to know, under which page of the 4th Draft Plan Sathyagraha comes.

ಶ್ರೀ ಎಸ್. ಶಿವಪ್ಪ.—ಮಾನ್ಯ ಮುಖ್ಯಮಂತ್ರಿಗಳು ಮೂರು ವರ್ಷದಿಂದ ಉಕ್ಕಿನ ಕಾರ್ಖಾನೆ ಮತ್ತು ಕೃಷ್ಣ ನದಿ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಕೇಂದ್ರಸರ್ಕಾರದವರಲ್ಲಿ ಅಗ್ರಹ ಪೂರ್ವಕವಾಗಿ ಒತ್ತಾಯ ಮಾಡಿದರು. ಆದರೆ ಇದುವರೆಗೂ ಕೇಂದ್ರದವರು ಮೈಸೂರಿನ ಬಗ್ಗೆ ಉದಾಸೀನತೆಯಿಂದ ಇದ್ದಾರೆ. ಮೈಸೂರು ದೇಶ ಇಡೀ ಭಾರತದಲ್ಲೇ ಜರಾಂತದಲ್ಲಿ ಸೇಕಡ 7 ಅಥವಾ 8 ರಷ್ಟು ಇದ್ದಾಗ್ಯೂ ಕೂಡ ಕೇಂದ್ರದವರು ಉದಾಸೀನದಿಂದಿರುವುದನ್ನು ತಪ್ಪಿಸುವುದಕ್ಕೆ ಮೈಸೂರು ಶಾಸನ ಸಭೆಯಲ್ಲಿ ಒತ್ತಾಯವನ್ನು ತರುವುದಕ್ಕೆ ' ಏನಾದರೂ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಹಗಲು ರಾತ್ರಿ ಹೇಳುತ್ತಿದ್ದಾರೆ. ನಾವು ಸಹ ಪ್ರಯತ್ನ ಮಾಡುತ್ತಿದ್ದೇವೆ. ಎಲ್ಲರೂ ಸಹ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಟಿ. ಜಿ. ಸತ್ಯನಾರಾಯಣ.—ಆಂಧ್ರದವರು ಉಕ್ಕಿನ ಕಾರ್ಖಾನೆ ಬೇಕೆಂದು ಸತ್ಯಾಗ್ರಹ ಮಾಡಿದರು ; ಬೆಂಕಿ ಹಚ್ಚಿದರು. ಅದೇ ರೀತಿ ನಮ್ಮ ರಾಜ್ಯಕ್ಕೆ ಉಕ್ಕಿನ ಕಾರ್ಖಾನೆ ಬೇಕೆಂದು ಬಳ್ಳಾರಿಯಲ್ಲಿ ಹರತಾಳವನ್ನು ಮಾಡಿದೆವು. ಸಾಂಬಮೂರ್ತಿ ಮೈದಾನದಲ್ಲಿ ಸಭೆ ನಡೆಸಿದೆವು. ಇನ್ನೂ ಹೆಚ್ಚು ' ಏನಾದರೂ ಮಾಡಿದರೆ ಬರುತ್ತದೋ ಹೇಗೆ ?

[No answer]

ಶ್ರೀ ಎಸ್. ಗೋಪಾಲಗೌಡ.—ಒಂದು, ಎರಡು ಮತ್ತು ಮೂರು ಯೋಜನೆಗಳನ್ನು ಕಾರ್ಯಗತ ಮಾಡುವಲ್ಲಿ ಸರ್ಕಾರದವರು ಏನು ಒಂದು ವಿಫಲತೆಯನ್ನು ಹೊಂದಿದ್ದಾರೆ, ಅದನ್ನು ಗಮನದಲ್ಲಿಟ್ಟುಕೊಂಡು ನಾಲ್ಕನೆಯ ಯೋಜನೆಯನ್ನು ಈಗ ತಯಾರಿಸುತ್ತಾ ಇದ್ದೀರೋ ಅಥವಾ ಮೊದಲಿನ ಮೂರು ಯೋಜನೆಗಳ ರೀತಿನೀತಿಗಳನ್ನೇ ಅನುಸರಿಸುತ್ತಿದ್ದೀರೋ ?

ಶ್ರೀ ಎಸ್. ನಿಜಲಿಂಗಪ್ಪ.—ಸಾಕಷ್ಟು ವಿವೇಚನೆ ಮಾಡಿ ಅನುಸರಿಸಿಕೊಂಡು ಹೋಗುತ್ತೇವೆ.

ಶ್ರೀ ಕೆ. ದೇವಯ್ಯ.—ಬೆಂಗಳೂರಿಗೆ ಕಾವೇರಿ ವಾಟರ್ ಸಪ್ಲೈ ಸ್ಕೀಮನ್ನು ಕಾರ್ಯಗತ ಮಾಡುವುದಕ್ಕೆ ನಾಲ್ಕನೆ ಯೋಜನೆಯಲ್ಲಿ ಎಷ್ಟು ಹಣ ಒದಗಿಸಿದ್ದೀರಿ ? ಮತ್ತು ವರ್ಲ್ಡ್ ಬ್ಯಾಂಕ್ ಅವರು 38 ಕೋಟಿ ರೂಪಾಯಿನ ಅಂದಾಜು ಏನು ಮಾಡಿದ್ದಾರೆ ಅದಕ್ಕೆ ಒಮ್ಮತ ಕೊಟ್ಟಿದ್ದಾರೆಯೆ ? ಹಾಗೂ ಬೆಂಗಳೂರು ಸಿಟಿಯಲ್ಲಿ ಬೆಟರ್ ರೋಡ್ಸ್, ಸ್ಲಮ್ಸ್ ಕ್ಲಿಯರೆನ್ಸ್, ಸರ್ಬನ್ ಟ್ರೇನ್ಸ್, ಸರ್ಕ್ಯುಲರ್ ಟ್ರೇನ್ಸ್ ಇವುಗಳ ಬಗ್ಗೆ ನಾಲ್ಕನೇ ಯೋಜನೆಯಲ್ಲಿ ಅವಕಾಶ ಕಲ್ಪಿಸಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ಬೆಂಗಳೂರಿಗೆ ಕಾವೇರಿ ನೀರನ್ನು ತರಲು ಆಲೋಚನೆ ಮಾಡುತ್ತಿದ್ದೇವೆ. ಒತ್ತಾಯ ಮಾಡುತ್ತಿದ್ದೇವೆ. ಸದ್ಯಕ್ಕೆ ಕಾವೇರಿ ನೀರನ್ನು ಬೆಂಗಳೂರಿಗೆ ತರುವ ಕೆಲಸವನ್ನು ಮುಗಿಸಿದರೆ ಸಾಕಾಗಿದೆ. ಬಾಕಿಯವುಗಳನ್ನು ಮುಂದೆ ನೋಡಬೇಕು.

ಶ್ರೀ ಎಸ್. ಗೋಪಾಲಗೌಡ.—ನನ್ನ ಒಂದು ಸಲಹೆ ಇದೆ. ಈ ಯೋಜನೆಗಳ ವಿಚಾರ ಬಂದಾಗ ಸ್ವಲ್ಪ ಹೆಚ್ಚು ಕಾಲವನ್ನು ಮೀಸಲಾಗಿಟ್ಟುಕೊಂಡು ಚರ್ಚೆಗೆ ಅವಕಾಶ ಮಾಡಿಕೊಡ ಬೇಕು.

Holalu pick up Channel in Mandya Taluk.

*Q.—59. **Sri J. DEVAIAH** (Mandya).—

Will the Minister for Public Works be pleased to state :—

(*a*) the extent of new atchkat proposed to be brought under irrigation by the Holalu pick up channel in Mandya Taluk ;

(*b*) the amount sanctioned for the construction of the said pick up ;

(*c*) the extent of land acquired for the construction of the said pick up ;

(*d*) whether land has been granted to persons who have lost their lands on account of the acquisition ?

Sri ALUR HANUMANTHAPPA (Deputy Minister for Minor Irrigation).—

A.—(*a*) 900 acres.

(*b*) Rs. 9·48 lakhs.

(*c*) A—G.
51–13

(*d*) No. However cases of expropriated ryots will be considered as per rules, subject to availability of land for grant.